ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಲಯ, ಶ್ರೀರಂಗಪಟ್ಟಣ.

ಕ್ರಿಮಿನಲ್ ಮೊಕದ್ದಮೆ ಸಂಖ್ಯೆ **: 14/2023**

ಚಾ.ಸಾ. **:-3**
ಪ್ರಾ.ಸಾ. **:-2**

| | |
|---|---|
| ಹೆಸರು | : ರಾಘವ.ಬಿ.ಆರ್ |
| ತಂದೆಯ ಹೆಸರು | : ರಾಜು |
| ವಯಸ್ಸು | : 37 ವರ್ಷ |
| ಉದ್ಯೋಗ | : ವ್ಯವಸಾಯ |
| ವಾಸಸ್ಥಳ | : ಬನ್ನಂಗಾಡಿ ಗ್ರಾಮ, ಪಾಂಡವಪುರ |

ಪ್ರಮಾಣೀಕರಿಸಲಾದ ದಿನಾಂಕಃ- **14.07.2026**

ಮುಖ್ಯ ವಿಚಾರಣೆ **:** ಮಾನ್ಯ ಸ.ಸ.ಅ.ರವರಿಂದ **:**

ಮೃತ ರವಿಕುಮಾರ್ ನನ್ನ ಜೊತೆ ಮುಂಚೆ ಕೆಲಸ ಮಾಡುತ್ತಿದ್ದರು. ಚಾ.ಸಾ-2, 4 ಪರಿಚಯ. ಸುಮಾರು 3 ವರ್ಷಗಳ ಹಿಂದೆ ಮಧ್ಯರಾತ್ರಿ ಸುಮಾರು 1.00 ರ ಸಮಯದಲ್ಲಿ ನನಗೆ ಚಾ.ಸಾ-2 ರವರು ದೂರವಾಣಿ ಕರೆ ಮಾಡಿದ್ದು, ರವಿಕುಮಾರ್ ರವರಿಗೆ ಅಪಘಾತವಾಗಿರುವುದಾಗಿ ತಿಳಿಸಿರುತ್ತಾರೆ. ನನ್ನ ಜೊತೆ ಆ ಸಮಯದಲ್ಲಿ ಚಾ.ಸಾ-4 ಮತ್ತು 5 ರವರು ಇದ್ದರು. ನಂತರ ನಾವುಗಳು ಅಪಘಾತ ಸ್ಥಳಕ್ಕೆ ಹೋಗಿದ್ದು, ಅಷ್ಟರಲ್ಲಿ ರವಿಕುಮಾರ್ ರವರು ಮೃತಪಟ್ಟಿದ್ದರು. ಸದರಿ ರಸ್ತೆಯಲ್ಲಿ ಮಧ್ಯಭಾಗದಲ್ಲಿ ವಾಹನವೊಂದು ಕೆಟ್ಟು ನಿಂತಿತ್ತು, ಆ ವಾಹನಕ್ಕೆ ರವಿಕುಮಾರ್ ರವರು ಹಿಂದಿನಿಂದ ಡಿಕ್ಕಿಪಡಿಸಿರುತ್ತಾರೆ. ಸದರಿ ಕೆಟ್ಟು ನಿಂತ ವಾಹನಕ್ಕೆ ಇಂಡಿಕೇಟರ್ ಹಾಕಿರಲಿಲ್ಲ. ನಂತರ ಖಾಸಗೀ ವಾಹನದಲ್ಲಿ ಅವರ ಮೃತದೇಹವನ್ನು ಆಸ್ಪತ್ರೆಗೆ ತೆಗೆದುಕೊಂಡು ಹೋಗಿರುತ್ತಾರೆ.

ಈಗ ನೋಡುತ್ತಿರುವ ದಾಖಲೆಯಲ್ಲಿರುವ ಸಹಿ ನನ್ನದು. ಪೊಲೀಸರು ಅಪಘಾತಕ್ಕೆ ಸಂಬಂಧಿಸಿದಂತೆ ಸ್ಥಳ ಮಹಜರ್ ಮಾಡಿರುತ್ತಾರೆ. ಸದರಿ ಮಹಜರನ್ನು ಈಗ ನೋಡುತ್ತಿದ್ದು ಅದನ್ನು ನಿಪಿ-2 ಎಂದು ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಮಹಜರ್ ಸಮಯದಲ್ಲಿ ನನ್ನ ಜೊತೆ ಬೇರೆ ಸಾಕ್ಷಿಗಳು ಸಹ ಹಾಜರಿದ್ದರು. ಸದರಿ ಮಹಜರ್ ನಲ್ಲಿ ಪೊಲೀಸರು ಕೃತ್ಯ ಸ್ಥಳದ ಕಚ್ಚಾ ನಕಾಶೆಯನ್ನು ತಯಾರು ಮಾಡಿರುತ್ತಾರೆ. ರಸ್ತೆ ಅಪಘಾತಕ್ಕೆ ಸಂಬಂಧಿಸಿದಂತೆ ಸದರಿ ಮಹಜರ್ ಗೆ ನಾನು ಸಹಿ ಮಾಡಿರುತ್ತೇನೆ. ಸದರಿ ಸಹಿಯನ್ನು ನಾನು ಅಪಘಾತ ಸ್ಥಳದ ಬಳಿ ಮಾಡಿರುತ್ತೇನೆ.

ನಂತರ ಪೊಲೀಸ್ ಠಾಣಾ ಆವರಣದಲ್ಲಿ ಅಪಘಾತಕ್ಕೆ ಸಂಬಂಧಿಸಿದಂತೆ 2 ವಾಹನಗಳನ್ನು ಪಂಚರ ಸಮಕ್ಷಮ ಮಹಜರ್ ಬರೆದು ಅಮಾನತ್ತುಪಡಿಸಿಕೊಂಡಿರುತ್ತಾರೆ. ಸದರಿ ಮಹಜರನ್ನು ಈಗ ನೋಡುತ್ತಿದ್ದು ಅದನ್ನು ನಿಪಿ-3 ಎಂದು, ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ಗೂಡ್ಸ್ ವಾಹನದ 1 ಫೋಟೋವನ್ನು ಈಗ ನೋಡುತ್ತಿದ್ದು ಅದನ್ನು ನಿಪಿ-4 ಎಂದು ಗುರುತಿಸಲಾಯಿತು. ದ್ವಿಚಕ್ರ ವಾಹನದ 1 ಫೋಟೋನ್ನು ಈಗ ನೋಡುತ್ತಿದ್ದು ಅದನ್ನು  ನಿಪಿ-5 ಎಂದು ಗುರುತಿಸಲಾಯಿತು. ಪೊಲೀಸರು ಠಾಣೆಯಲ್ಲಿ ಗೂಡ್ಸ್ ವಾಹನದ ಚಾಲಕನನ್ನು ತೋರಿಸಿರುತ್ತಾರೆ.

ನಾನು ಸ್ಥಳಕ್ಕೆ ಹೋಗಿ ನೋಡಿದಾಗ ಸದರಿ ಲಾರಿಗೆ ಇಂಡಿಕೇಟರ್ ಗಳನ್ನು ಹಾಕದೇ ರಸ್ತೆಯಲ್ಲಿ ನಿಲ್ಲಿಸಿದ್ದರು. ಮೃತ ರವಿಕುಮಾರ್ ಸಹ ಆ ದಿನ ಮದ್ಯಪಾನ ಮಾಡಿದ್ದರು. ಇಬ್ಬರೂ ಚಾಲಕರ ನಿರ್ಲಕ್ಷ್ಯತನದಿಂದ ಸದರಿ ಅಪಘಾತವಾಗಿರುತ್ತದೆ.

<u>ಪಾಟೀ ಸವಾಲು : ಆರೋಪಿ ಪರ ವಕೀಲರಿಂದ :</u>

ಈಗ ಹೇಳಿದಂತಹ ವಿಚಾರಗಳನ್ನು ಇದಕ್ಕೂ ಮುಂಚೆ ಬೇರೆಯವರಿಗೆ ಹೇಳಿರುವುದಿಲ್ಲ ಎಂದರೆ ಸರಿ. ನಾನು ಪೊಲೀಸರ ಮುಂದೆ ಹೇಳಿಕೆ ನೀಡಿದಾಗ ಶಿವಣ್ಣರವರು ನೇರವಾಗಿ ನನ್ನ ಬಳಿ ಬಂದು ಅಪಘಾತದ ಬಗ್ಗೆ ತಿಳಿಸಿರುತ್ತಾರೆಂದು ಹೇಳಿದ್ದು, ಈ ದಿನ ಸಾಕ್ಷಿ ಹೇಳುವಾಗ ಶಿವಣ್ಣರವರು ಫೋನ್ ಮೂಲಕ ಅಪಘಾತದ ಬಗ್ಗೆ ತಿಳಿಸಿರುತ್ತಾರೆಂದು ಹೇಳಿರುತ್ತೇನೆಂದರೆ ಸಾಕ್ಷಿ ಅವರು ನನಗೆ

ಫೋನ್ ಮೂಲಕ ಹೇಳಿದ್ದರು ಎನ್ನುತ್ತಾರೆ. ನನಗೆ ದೂರವಾಣಿ ಕರೆ ಮಾಡಿದಾಗ ಶಿವಣ್ಣರವರು ಅಪಘಾತ ಸ್ಥಳದಲ್ಲಿದ್ದರು. ನನಗೆ ಯಾರೂ ದೂರವಾಣಿ ಕರೆ ಮಾಡಿ ಅಪಘಾತದ ಬಗ್ಗೆ ತಿಳಿಸಿಲ್ಲ ಹಾಗೂ ನಾವುಗಳು ಸ್ಥಳಕ್ಕೆ ಹೋಗಿಲ್ಲ ಎಂದರೆ ಸುಳ್ಳು. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನಾನು ಇದಕ್ಕೂ ಮುಂಚೆ ನೋಡಿಲ್ಲ ಎಂದರೆ ಸರಿ. ನಾನು ಸ್ಥಳಕ್ಕೆ ಹೋಗಿ ನೋಡಿದಾಗ ಲಾರಿಯು ರಸ್ತೆಯ ಮಧ್ಯದಲ್ಲಿ ನಿಂತಿರಲಿಲ್ಲ ಎಂದರೆ ಸುಳ್ಳು. ಮೃತರು ಮದ್ಯಪಾನ ಮಾಡಿ ಮರಕ್ಕೆ ಡಿಕ್ಕಿಪಡಿಸಿರುತ್ತಾರೆ ಎಂದರೆ ಸುಳ್ಳು.

ಮೃತರ ತಪ್ಪಿನಿಂದಲೇ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ. ನಾನು ಎಲ್ಲಾ ಸಹಿಗಳನ್ನು ಪೊಲೀಸ್ ಠಾಣೆಯ ಬಳಿ ಮಾಡಿರುತ್ತೇನೆ ಎಂದರೆ ಸುಳ್ಳು. ಮಹಜರ್ ಗೆ ಬೇರೆ ಯಾರು ಸಹಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಮಹಜರಿನಲ್ಲಿ ಏನು ಬರೆದಿರುತ್ತದೆ ಎಂದು ನನಗೆ ತಿಳಿದಿಲ್ಲ ಎಂದರೆ ಸುಳ್ಳು. ಮೃತರ ಕುಟುಂಬದವರು ನನಗೆ ಪರಿಚಯವಿರುವ ಕಾರಣ ಅವರಿಗೆ ವಿಮೆ ಪರಿಹಾರ ಕೊಡಿಸಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ :</u> ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಈ ದಿನ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಓದಲಾಗಿದೆ.

ಪ್ರಧಾನ ಹಿರಿಯ ಸಿಜೆ ಮತ್ತು
ಜೆ.ಎಂ.ಎಫ್.ಸಿ., ಶ್ರೀರಂಗಪಟ್ಟಣ.

**ಸಾಕ್ಷಿದಾರರ ಸಹಿ.**